# ವೀಣಾಶಾಂತೇಶ್ವರರವರ ಕಥನ ಸಾಹಿತ್ಯದಲ್ಲಿ ಆಧುನಿಕ ಹೆಣ್ಣಿನ ಚಹರೆ

**ಶ್ರೀಮತಿ ಆಶಾ**
ಕನ್ನಡ ಸಹಾಯಕ ಪ್ರಾಧ್ಯಾಪಕರು ಹಾಗೂ ಸಂಶೋಧನಾರ್ಥಿ (ಕನ್ನಡ ವಿಶ್ವವಿದ್ಯಾಲಯ, ಹಂಪಿ)
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪಾಶ್ಚಾಪೂರ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ

**ಡಾ. ಸೋಮಶೇಖರ ಎಂ**
ಸಹ ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು (ಮಾನ್ಯತಾ ಕೇಂದ್ರ: ವೀರಶೈವ ಮಹಾವಿದ್ಯಾಲಯ, ಬಳ್ಳಾರಿ)
ಎಸ್.ಜಿ.ಆರ್.ಸಿ.ಎಂ. ಸರ್ಕಾರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಬಳ್ಳಾರಿ

**OPEN ACCESS**

Volume: 12

Special Issue: 1

Month: October

Year: 2024

E-ISSN: 2582-0397

P-ISSN: 2321-788X

Impact Factor: 3.025

Citation:
ಶ್ರೀಮತಿ ಆಶೆ, and ಡಾ. ಸೋಮಶೇಖರ ಎಂ "ವೀಣಾಶಾಂತೇಶ್ವರರವರ ಕಥನ ಸಾಹಿತ್ಯದಲ್ಲಿ ಆಧುನಿಕ ಹೆಣ್ಣಿನ ಚಹರ." *Shanlax International Journal of Arts, Science and Humanities,* vol. 12, no. S1, 2024, pp. 241–45.

DOI:
https://doi.org/10.34293/sijash.v12iS1-Oct.8314

ಸಾಹಿತ್ಯಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಶ್ರೀಮಂತಿಕೆಯನ್ನು ಹೊಂದಿದ ಕನ್ನಡ ಭಾಷಾ ಸಾಹಿತ್ಯ ಕೆಲವು ತಾತ್ವಿಕ ಭಿನ್ನತೆಗಳಿಂದ ಹೊಸಗನ್ನಡ ಕಾಲ ಘಟ್ಟದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ–ಬಂಡಾಯ, ಮಹಿಳಾ ಸಾಹಿತ್ಯ ಹೀಗೆ ಹಲವು ಬಗೆಗಳಾಗಿ ರೂಪಗೊಂಡಿತು. ದಲಿತ ಬಂಡಾಯ ಸಾಹಿತ್ಯದ ಜೊತೆ ಜೊತೆಗೆ ನಡೆದು ಬಂದ ಇನ್ನೊಂದು ಚಳುವಳಿ ಎಂದರೆ ಸ್ತ್ರೀಯರ ಅಸ್ಮಿತೆಯನ್ನು ಜಾಗೃತಗೊಳಿಸಲು ನಡೆದ ಒಂದು ಗಂಭೀರ ಚಿಂತನೆಯ ಸಾಹಿತ್ಯಿಕ ಚಳುವಳಿ, ಸ್ತ್ರೀವಾದಿ ಚಳುವಳಿ. ಪಾಶ್ಚಾತ್ಯ ದೇಶಗಳಲ್ಲಿ ಕೈಗಾರಿಕಾ ಕ್ರಾಂತಿ ಮತ್ತು ಯಂತ್ರ ನಾಗರಿಕತೆಯ ಸಂದರ್ಭದಲ್ಲಿ ಕಾಣಿಸಿಕೊಂಡ ಸ್ತ್ರೀವಾದಿ ಚಳುವಳಿ 1970ರ ದಶಕದಲ್ಲಿ ಕನ್ನಡ ಸಾಹಿತ್ಯಕ್ಕೂ ಪ್ರವೇಶ ಪಡೆಯಿತು. ನವೋದಯ ಪೂರ್ವದ ಹಾಗೂ ನವೋದಯದ ಕೆಲವು ಲೇಖಕ ಹಾಗೂ ಲೇಖಕಿಯರ ಬರಹಗಳಲ್ಲಿ ಸ್ತ್ರೀವಾದಿ ದೃಷ್ಟಿಕೋನ ಹಾಗೂ ಸ್ತ್ರೀವಾದಿ ಚಿಂತನೆ ನಿರೂಪಿತವಾಗುತ್ತದೆ. ಸ್ತ್ರೀವಾದಿ ದೃಷಿಕೋನವನ್ನು ಹೊಂದಿರುವುದಲ್ಲದೆ ಅದನ್ನು ಸಮರ್ಥವಾಗಿ ತಮ್ಮ ಬರಹಗಳಲ್ಲಿ ಹಿಡಿದಿಡುವ ಸಾಮರ್ಥ್ಯ ಹೊಂದಿದ ಲೇಖಕಿಯರ ಸಂಖ್ಯೆ ತುಂಬಾ ವಿರಳ.ಅಂತಹ ಸಾಮರ್ಥ್ಯ ಹೊಂದಿದ ಅಪರೂಪದ ಲೇಖಕಿ ವೀಣಾ ಶಾಂತೇಶ್ವರ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್. ಅವರ ನಂತರ ಬರುವ ನವ್ಯ ಸ್ತ್ರೀ ಧ್ವನಿ ಎಂದರೆ ವೀಣಾಶಾಂತೇಶ್ವರ ಅವರದು. ನವ್ಯ ಸಾಹಿತ್ಯ ಕಾಲ ಘಟ್ಟದಲ್ಲಿ, ನವ್ಯ ಪ್ರಜ್ಞೆಯ ಅತ್ಯುತ್ತಮ ಲೇಖಕಿಯಾಗಿ ವೀಣಾಶಾಂತೇಶ್ವರ ಕಾಣಿಸುತ್ತಾರೆ. ಸ್ತ್ರೀವಾದಿ ಆಧುನಿಕ ಕನ್ನಡ ಕಥಾ ಸಾಹಿತ್ಯದಲ್ಲಿ ತಮ್ಮದೇ ಆದ ಹೊಸ ಪರಂಪರೆಯನ್ನು ಲೇಖಕರಿಗೆ ನಿರ್ಮಿಸಿಕೊಟ್ಟ ಲೇಖಕಿ ಇವರು. ನವ್ಯದ ಉಚ್ಛ್ರಾಯ ಕಾಲದ ಮಹಿಳಾ ಸಂವೇದನೆಗೆ ಹೊಸದಾರಿಯನ್ನು ತೆರೆದವರೆಂದು ಮನ್ನಣೆ ಪಡೆದಿದ್ದಾರೆ. ಸ್ತ್ರೀವಾದ ಎಂಬ ಪದವು ಕನ್ನಡ ಸಾಹಿತ್ಯವನ್ನು ಪ್ರವೇಶಿಸದೇ ಇದ್ದ ಕಾಲದಲ್ಲಿ ತೀವ್ರ ಸ್ತ್ರೀಸಂವೇದನೆಯನ್ನು ಕತೆಗಳ ಮೂಲಕ ಪ್ರತಿಪಾದಿಸಿದ್ದು ವೀಣಾ ಅವರ ಸಾಧನೆಯಾಗಿದ್ದು ಕನ್ನಡ ಕಥಾ ಸಾಹಿತ್ಯದಲ್ಲಿ ಅವರಿಗೊಂದು ದೊಡ್ಡಸ್ಥಾನವಿದೆ.

ಅವರ ಕಥೆಗಳಲ್ಲಿ ಕಾಣುವ ಸ್ತ್ರೀ, ಪಾರಂಪರಿಕ ಸ್ತ್ರೀಗಿಂತ ಭಿನ್ನವಾದ ಆಧುನಿಕ ಹೆಣ್ಣಿನ ಚಹರೆಯುಳ್ಳ ದಿಟ್ಟ ಸ್ತ್ರೀ.ಅಂದರೆ, ತನ್ನ ದೃಷ್ಟಿಕೋನದಲ್ಲಿ ಆಧುನಿಕ ಮನೋಧೋರಣೆ ಹೊಂದಿರುವ ವಿದ್ಯಾವಂತ ಸ್ತ್ರೀ.ಅವರ ಕಥಾ ನಾಯಕಿಯರು ಏಕೆ ಭಿನ್ನ? ಸಂಗಾತಿಯ ಆಯ್ಕೆ, ವಿವಾಹ, ಸಂತಾನ ಪಡೆಯುವಿಕೆ, ಲೈಂಗಿಕತೆ, ಉದ್ಯೋಗ ಇಂತಹ ವಿಚಾರಗಳಲ್ಲಿ ಅವರ ಆಯ್ಕೆಯ ಸ್ವರೂಪ? ಸ್ವತಂತ್ರ ನಿರ್ಧಾರ ಕೈಗೊಳ್ಳುವಲ್ಲಿ ಸಫಲರಾಗುವ ಪರಿ ಎಂಥಹುದು? ಅದರ ಪರಿಣಾಮದಿಂದ ಅವಳಿಗೆ ದಕ್ಕುವ ಸುಖ, ದುಖಃ ಎರಡಕ್ಕೂ ಆ ಕಥಾ ನಾಯಕಿಯರು ಹೇಗೆ ಹೊಣೆಗಾರಳಾಗುತ್ತಾಳೆ? ಸೋಲು ಉಂಟಾದಲ್ಲಿ ಅದನ್ನು ದಿಟ್ಟವಾಗಿ ಹೇಗೆ ಎದುರಿಸುವಳು? ಸಂದರ್ಭವನ್ನು ನಿಭಾಯಿಸುವ ಜಾಣ್ಮೆ ಎಂತಹುದು? ಇಂತಹ ಎಲ್ಲ ಪ್ರಶ್ನೆಗಳಿಗೆ ಉತ್ತರವಾಗಿ ಲೇಖನದ ಆಶಯವಿದೆ. ಆಧುನಿಕ ಸವಾಲುಗಳಿಗೆ ಒಡ್ಡಿಕೊಳ್ಳುವ, ಎಲ್ಲ ಸಮಸ್ಯೆಗಳಿಗೆ ಯಾರ ಮರುಕಕ್ಕೂ ಕಾಯದೆ ಪರಿಹಾರ ಕಂಡುಕೊಳ್ಳುವ ಆಧುನಿಕ ಸ್ತ್ರೀಯ ಚಹರೆಯನ್ನು ವೀಣಾಶಾಂತೇಶ್ವರವರ ಕಥಾ ನಾಯಕಿಯರ ಮೂಲಕ ಅನಾವರಣಗೊಳಿಸುವುದು ಈ ಲೇಖನದ ಬಹು ಮುಖ್ಯ ಆಶಯ.

1970ರ ದಶಕದ ಆರಂಭದಲ್ಲಿ ಮುಕ್ತವಾಗಿ ಬರೆಯ ಬಯಸುವ ಲೇಖಕಿಯರಿಗೆ ನವ ಮಾರ್ಗವು ದೊರೆಯಿತು. ಪಾಶ್ಚಾತ್ಯ ವೈಚಾರಿಕತೆಯಿಂದ, ಜಾಗತಿಕ ಸ್ತ್ರೀವಾದಿ ಚಿಂತನೆಗಳಿಂದ, ಜೀವನಾನುಭವದಿಂದ ತಾವು ಪಡೆದುದನ್ನು ವಾಸ್ತವದ ಕುಲುಮೆಯಲ್ಲಿ ಹದಗೊಳಿಸುತ್ತ, ಜೀವಪರಮಾನವಾಸಕ್ತಿಗಳಿಂದ ಮಾಗುತ್ತ ಬೆಳೆದ ವೀಣಾ ಶಾಂತೇಶ್ವರರವರು, ಕನ್ನಡ ಸಾಹಿತ್ಯದಲ್ಲಿ ವಿಭಿನ್ನ ಹೆಜ್ಜೆ ಗುರುತುಗಳನ್ನು ಮೂಡಿಸಿದವರು. ವಾಸ್ತವಪ್ರಜ್ಞೆಯ ಲೇಖಕಿಯಾದ ವೀಣಾಶಾಂತೇಶ್ವರ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಶ್ರೇಷ್ಠ ಕಥೆಗಾರ್ತಿ, ಕಾದಂಬರಿಕಾರ್ತಿ ,ಉತ್ತಮ ಅನುವಾದಕರಾಗಿ, ಸಂಪಾದಕರಾಗಿ ಬಹು ಮುಖ ಸಾಹಿತ್ಯ ಪ್ರಕಾರಗಳಲ್ಲಿ ತಮ್ಮನ್ನು ತೊಡೆಸಿಕೊಂಡವರು ಅವರ ದಿಟ್ಟ ಬರವಣಿಗೆಗೆ ಅವರ ಕೌಟುಂಬಿಕ ಹಿನ್ನೆಲೆ ಹಾಗೂ ಅವರ ಶೈಕ್ಷಣಿಕ ಹಿನ್ನೆಲೆ ಕಾರಣ ಅಲ್ಲದೆ. ಅವರ ಬರವಣಿಗೆಗೆ ಮತ್ತಷ್ಟು ಮೊನಚು ದೊರೆತದ್ದು ಇಂಗ್ಲೀಷ್ ಹಾಗೂ ಮರಾಠಿ ಸಾಹಿತ್ಯದ ಓದಿನಿಂದ.

ಇಲ್ಲಿರುವ ಕಥಾ ನಾಯಕಿಯರು ವಿದ್ಯಾವಂತರು, ತನ್ನ ಸಮಸ್ಯೆಯ ಅರಿವುಳ್ಳವರು, ವಿಚಾರವಂತರು, ತನ್ನ ವೈಯಕ್ತಿಕ ಸಮಸ್ಯೆಗಳನ್ನು ದಿಟ್ಟವಾಗಿ ಎದುರಿಸುವ ಸ್ತ್ರೀಯರು, ಆಯ್ಕೆಯ ಸ್ವಾತಂತ್ರ್ಯ ಬಯಸುವ, ಸ್ವಾವಲಂಬಿಯಾಗಲು ಹೆಣಗಾಡುವ, ವಾಸ್ತವ ಪ್ರಜ್ಞೆಯುಳ್ಳ, ಅಸ್ತಿತ್ವದ ಹುಡುಕಾಟಕ್ಕಾಗಿ ಆತ್ಮಶೋಧನೆ ಮಾಡಿಕೊಳ್ಳುವ, ಸಾಧ್ಯವಾದಲ್ಲಿ ಪ್ರತಿಭಟನೆಗೆ ಸಿದ್ಧಳಾಗಿರುವ, ಸೋತಲ್ಲೇ ಗೆಲ್ಲುವ ಧೀರತೆಯನ್ನು ಹೊಂದಿದ ಆಧುನಿಕ ಹೆಣ್ಣಿನಲ್ಲಿರುವ, ಇರಬೇಕಾದ ಲಕ್ಷಣಗಳನ್ನು  ಯಾವ ಹಿಂಜರಕೆಯಿಲ್ಲದೆ ತಮ್ಮ ಬರಹಗಳಲ್ಲಿ ನಿರೂಪಿಸಿದ್ದಾರೆ. ಬರಗೂರು ರಾಮಚಂದ್ರಪ್ಪ ಹೇಳುವಂತೆ "ವೀಣಾರವರ ಈ ಬಗೆಯ ಕಥೆಗಳ ದೌರ್ಬಲ್ಯವೇನೇ ಇರಲಿ ಈ ಕಥೆಗಳಲ್ಲಿ ಪ್ರಕಟವಾಗುವ ಹೆಣ್ಣಿನ ಆಧುನಿಕ ಮನಸ್ಸಿನ ಚಿತ್ರಣ ಮುಖ್ಯವಾದದ್ದು. ಹಾಗೆಯೇ ಸ್ತ್ರೀ ಆಯ್ಕೆಯ ಸ್ವಾತಂತ್ರ್ಯದ ವಿಚಾರವನ್ನು ತಮ್ಮ ಕಥೆಗಳಲ್ಲಿ ನಿರ್ವಹಿಸಿರುವ ರೀತಿ ಉತ್ತಮವಾಗಿದೆ. ಗಂಡಿನ ವಿಚಾರದಲ್ಲಿ ಅವರ ಕಥೆಯ ನಾಯಕಿಯರು ಆಧುನಿಕ ಮನೋಧರ್ಮದಿಂದ ಪ್ರತಿಕ್ರಿಸುತ್ತಾರೆ."1

ವೀಣಾಶಾಂತೇಶ್ವರ ತಮ್ಮ ಕಥೆಗಳ ಸ್ತ್ರೀಪಾತ್ರಗಳನ್ನು ಕುರಿತು ಹೀಗೆ ಬರೆದಿದ್ದಾರೆ "ಏಕಾಕಿಯಾಗಿ ಗಂಡಸಿನ ಹಾಗೂ ಸಮಾಜದ ಅನ್ಯಾಯಗಳ ವಿರುದ್ಧ ಹೋರಾಡುವ ಮಹಿಳೆಯ ದಾರಿ ಇನ್ನೂ ಸುಗಮವಾಗಿಲ್ಲ. ಪರಿಪೂರ್ಣ ಮಹಿಳಾ ಸ್ವಾತಂತ್ರ್ಯಕ್ಕೆ ಕಾಲವಿನ್ನೂ ಪಕ್ವವಾಗಿಲ್ಲ, ಆಕೆ ಹೊಂದಾಣಿಕೆ ಮಾಡಿಕೊಳ್ಳಬೇಕು ಅಥವಾ ತನ್ನ ತತ್ವಗಳಿಗಾಗಿ ನೋವು ಅನುಭವಿಸುತ್ತ ಬದುಕಿರಬೇಕು. ಹೋರಾಡಿ ಜಯಗಳಿಸಿಯೂ ಸುಖವಾಗಿರುವ ಭಾಗ್ಯ ತೀರಾ ಕಡಿಮೆ ಸಂಖ್ಯೆಯ ಮಹಿಳೆಯರಿಗಿದೆ. ಉಳಿದವರನ್ನು ಈ ಸಮಾಜ ಒತ್ತಾಯದಿಂದ ಹೊಂದಾಣಿಕೆ ಮಾಡಿಕೊಳ್ಳಲು ಹಚ್ಚುತ್ತದೆ. ಈ ಮಹಿಳೆಯರು ಅಂಜುಬುರುಕರಲ್ಲ, ಹೇಡಿಗಳಲ್ಲ. ಕಟುವಾಸ್ತವದ ಅರಿವುಳ್ಳವರು. ಇವರು ಸೋತವರಲ್ಲ, ಪಕ್ವತೆಹೊಂದಿದವರು," 2 ಹೀಗೆ ವೀಣಾ ಶಾಂತೇಶ್ವರ ತಮ್ಮ ಕಥೆಗಳಲ್ಲಿ ಚಿತ್ರಿಸಿರುವ ಈ ಆಧುನಿಕ ಮನೋಧರ್ಮದ ಆಧುನಿಕ ಹೆಣ್ಣಿನ ವಿಭಿನ್ನ ಚಹರೆಗಳನ್ನು ಅವರ ಕೆಲವು ಪ್ರಾತಿನಿಧಿಕ ಕಥೆಗಳ ಮೂಲಕ ಶೋಧಿಸುವ ಪ್ರಯತ್ನ ಇಲ್ಲಿದೆ.

ವೀಣಾರ ಮೊದಲ ಕಥಾ ಸಂಕಲನವಾದ "ಮುಳ್ಳುಗಳು".ಇದರಲ್ಲಿ ಐದು ಕತೆಗಳು ನಾಯಕಿ ಕೇಂದ್ರಿತವಾಗಿದ್ದು, "ಮುಳ್ಳುಗಳು" ಕಥೆಯಲ್ಲಿ ಶಾಂತಿ ಎಂಬ ಕಾಲೇಜು ಶಿಕ್ಷಕಿ ತರುಣಿ, ಅವಿವಾಹಿತೆ. ಹಿಂದೆಂದೋ ಒಬ್ಬ ಗಂಡಿನಿಂದಾದ ವಂಚನೆಯನ್ನು ಮರೆಯಲಾಗದೆ ಈಗಲೂ ಒದ್ದಾಡುತ್ತಿರುವ ಹೆಣ್ಣು. ಈ ಕಥೆಯಲ್ಲಿ ಶಾಂತಿ ಸ್ವಗತದ ಮೂಲಕವೇ ತನ್ನ ಮನಸ್ಸಿನ ತುಮುಲಗಳನ್ನು, ಮನೋಇಂಗಿತವನ್ನು ವ್ಯಕ್ತಪಡಿಸುತ್ತಾಳೆ. ಹಿಂದಿನ ಘಟನೆ ಆಕೆಯನ್ನು ಪುರುಷ ದ್ವೇಷಿಯಾಗಿಸಿರುತ್ತದೆ. ಗಂಡಿನ ಎಲ್ಲ ನೋಟದಲ್ಲು ಮುಳ್ಳು ಚುಚ್ಚಿದ ಅನುಭವವಾಗುತ್ತದೆ ಅವಳಿಗೆ. ಮೇಲ್ನೋಟಕ್ಕೆ ಕಾಣುವ ಅವಳ ಪುರುಷ ದ್ವೇಷದ ನಿಲುವು ಕಥೆ ಓದುತ್ತ ಹೋದಂತೆ ಸಾಂಧರ್ಭಿಕವಾಡುತ್ತದೆ, ಅಲ್ಲಗಳೆಯಲ್ಪಡುತ್ತದೆ. ಮುಳ್ಳುಗಳು ಅವಳು ತನ್ನ ಸ್ವಯಂ ರಕ್ಷಣೆಯ ತಂತ್ರಗಳಾಗಿವೆ. ಆಧುನಿಕ ಕಾಲದಲ್ಲಿ ಶಿಕ್ಷಣ, ಉದ್ಯೋಗ ಪಡೆದೂ ಯೌವ್ವನಾವಸ್ಥೆಯಲ್ಲಿರುವಂಥ ಮಹಿಳೆಯು ನಮ್ಮ ಈ ಪರಂಪರಾಗತ ಸಮಾಜದಲ್ಲಿ ಅನುಭವಿಸುವ ಅಭದ್ರ ಸ್ಥಿತಿ, ವಯೋ ಸಹಜ ಕಾಮನೆಗಳು ಮತ್ತು ಅವುಗಳ ಈಡೇರುವಲ್ಲಿ ಇರುವ ಭೀತಿ, ಈಡೇರದಿದ್ದಲ್ಲಿ ಉಂಟಾಗುವ ಒತ್ತಡ, ಅಸಹಾಯಕತೆ. ಇವೆಲ್ಲವನ್ನೂ ಲೇಖಕಿ ನಿರ್ಭಿಡೆಯಿಂದ ದಾಖಲಿಸಿದ್ದಾರೆ. ಹೀಗೆ ಇಲ್ಲಿಯವರೆಗೂ ಮಹಿಳೆಯನ್ನು ಆದರ್ಶ ನಾರಿಯಾಗಿಯೂ, ಮುಗ್ಧಳಾಗಿಯೂ, ತ್ಯಾಗಜೀವಿಯಾಗಿಯೂ, ಮರ್ಯಾದೆಯ ಚೌಕಟ್ಟಿನಲ್ಲಿಯೂ ಚಿತ್ರಿಸುತ್ತಿದ್ದಂಥ ಸಂದರ್ಭದಲ್ಲಿ ವೀಣಾಶಾಂತೇಶ್ವರ ವಾಸ್ತವಪ್ರಜ್ಞೆಯಿಂದ ಆಧುನಿಕ ಮನೋಭಾವದ ಹೆಣ್ಣಿನ ಅಂತರಾಳವನ್ನು ಚಿತ್ರಿಸಿದ್ದಾರೆ.

1970ರ ದಶಕದಲ್ಲಿ ಪ್ರಕಟವಾದ "ಗಂಡಸರು" ಕಿರು ಕಾದಂಬರಿಯ ನಾಯಕರು ಗಂಡಸರಲ್ಲ. ಬದಲಾಗಿ ಇದರ ನಾಯಕಿ ಶಾಂತಿ ಕಾಮತ್. ಸಾಹಿತ್ಯಿಕ ವಲಯದಲ್ಲಿ ವಿಮರ್ಶಕರಲ್ಲಿ ದಿಗ್ಭ್ರಮೆ ಮೂಡಿಸಿದ ಕಾದಂಬರಿ. ಸಾಂಪ್ರದಾಯಿಕ ಮೌಲ್ಯಗಳಿಗೆ ಕಟ್ಟು ಬಿದ್ದ ನಮ್ಮ ಸಮಾಜದಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಿದ ಇಲ್ಲಿಯ ಕಾಥಾ ನಾಯಕಿ ಶಾಂತಿ ಕಾಮತ್ ಗಂಡಿನ ಆಧುನಿಕತೆಯ, ಪ್ರಗತಿಪರ ಮುಖವಾಡವನ್ನು ಕಳಚಲು ಯತ್ನಿಸುತ್ತಾಳೆ. ಎಷ್ಟೇ ಶಿಕ್ಷಣ ಪಡೆದರೂ ಹೆಣ್ಣಿನ ಸ್ವಾತಂತ್ರ್ಯ, ಸಮಾನತೆಯನ್ನು ಒಪ್ಪದ ಗಂಡಿನ ಬೂಟಾಟಿಕೆ ಕಾದಂಬರಿಯಲ್ಲಿ ನಿರ್ಭಿಡೆಯಿಲ್ಲದೆ ವ್ಯಕ್ತವಾಗುತ್ತದೆ. ಗಂಡ  ಈ ಕನಾಯಕಿ ಶಾಂತಿ ಕಾಮತ್ ಸ್ವಾಭಿಮಾನಿ, ಅವಳ ಸ್ವಾಭಿಮಾನದ ವ್ಯಕ್ತಿತ್ವವನ್ನು ನಕಾರಾತ್ಮಕವಾಗಿ ನೋಡಿದ, ಅವಳ ಬಾಲ್ಯದ ಗೆಳೆಯ ಶಂಕರ ಮತ್ತು ಅವನ ತಂದೆ–ತಾಯಿ ಶಂಕರನ ಜೊತೆಗಿನ ಶಾಂತಿಯ ಮದುವೆ ಪ್ರಸ್ತಾಪವನ್ನು ತಿರಸ್ಕರಿಸುತ್ತಾರೆ. ಕೆಲಸ ಹುಡುಕಿಕೊಂಡು ಮುಂಬಯಿಗೆ ಹೋದ ಶಾಂತಿಗೆ ಗಂಡಿನ ವಿವಿಧ ಮುಖಗಳು ಅನಾವರಣಗೊಳ್ಳುತ್ತವೆ. ಗಂಡು ಎಂತಹವನಾದರೂ ಹೆಣ್ಣನ್ನು ಸಂಶಯಿಸುವುದು, ಅವಳಿಂದ ಮಾತ್ರ ನಿಷ್ಠೆಯನ್ನು ನಿರೀಕ್ಷಿಸುವುದು. ಇವೆಲ್ಲವುಗಳು ಶಾಂತಿ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳಲು ಕಾರಣವಾಗುತ್ತವೆ. ರಮಾಕಾಂತ ಶಿಂಧೆಯಂತಹವರು ತಾವು ಹೇಗಿದ್ದರೂ ಪರವಾಗಿಲ್ಲ, ಜೊತೆಗಿರುವ ಹೆಣ್ಣು ಸಂಪ್ರದಾಯದ ಲಕ್ಷ್ಮಣರೇಖೆಯೊಳಗೇ ಇರಬೇಕೆನ್ನುವವರು, ವಿದ್ಯಾರ್ಥಿನಿಯರ ಜೊತೆ ಅನುಚಿತ ವರ್ತನೆ ಮಾಡುವ ಸ್ವಭಾವದ ಮಠದ್ನಂತಹ ಪ್ರೊಫೆಸರುಗಳು ಹೆಂಡತಿಯಾಗುವ ಮೊದಲೇ ಅಧಿಕಾರ ಸ್ಥಾಪಿಸಲು ಹೊರಡುವ ಜಾನ್, ಹೀಗೆ ಇವರೆಲ್ಲರನ್ನೂ ಮೀರಬಯಸುವ ಶಾಂತಿ ಅವರಂತಾಗುವ ಅನಿವಾರ್ಯತೆ ಉಂಟಾಗುತ್ತದೆ. ಶಾಂತಿ ಸಾಂಪ್ರದಾಯಿಕ ಮೌಲ್ಯಗಳನ್ನು ಮೀರಿ ತನ್ನ ಆಯ್ಕೆಯಂತೆ

ಬದುಕಿನ ಮುಂದಿನ ಹೆಜ್ಜೆ ಹಾಕುತ್ತಾಳೆ. ಸಮಾಜದ ಸ್ತುತಿ,ನಿಂದನೆಗಳು ಆಕೆಗೆ ಬೇಕಿಲ್ಲ. ಐದು ದಶಕದ ಹಿಂದೆ ವೀಣಾ ಇಂತಹ ಕಥೆಯನ್ನು ಬರೆದಾಗ ಸಾಂಪ್ರದಾಯಿಕ ಮನೋಭಾವದ ಓದುಗರು ಬೆಚ್ಚಿ ಬಿದ್ದಿದ್ದರು. ”ಸಂಪ್ರದಾಯಸ್ಥರಿಗೆ ಹೆಣ್ಣೆಂದರೆ ಗಂಡನ್ನು, ಆ ಧರ್ಮವನ್ನು ಆರಾಧಿಸುವುದು ಆರಾಧಿಸಬೇಕಾದವಳು ಎಂದು ಭಾವಿಸಿದವರಿಗೆ ಗುಂಡೇಟು ಹಾಕಿದಂತಿದೆ. ಮದುವೆಯ ಒಳಗಾಗಲಿ ಹೊರಗಾಗಲಿ ಗಂಡಿಗೆಷ್ಟು ಸ್ವಾತಂತ್ರ್ಯವಿದೆಯೋ ಅಷ್ಟೇ ಸ್ವಾತಂತ್ರ್ಯ ಹೆಣ್ಣಿಗೂ ಇದೆಯೆಂದು ಗಂಡಿನಾನುಭವದ ತೂಗಳತೆಯಲ್ಲಿ ತಿಳಿದುಬರುತ್ತದೆ”.3

ಆಧುನಿಕ ಸ್ತ್ರೀಯ ನಡೆಯನ್ನು ವಾಸ್ತವಪ್ರಜ್ಞೆಯಿಂದ ಸೂಚಿಸಿದ ಕೃತಿ ಇದಾಗಿದೆ. ಅದರ ಪ್ರತಿನಿಧಿಯಾಗಿ ಕಥಾ ನಾಯಕಿ ಶಾಂತಿ ಕಾಣಿಸಿಕೊಳ್ಳುತ್ತಾಳೆ.

1972ರಲ್ಲಿ ಪ್ರಕಟವಾದ ವೀಣಾಅವರ ‘ಕೊನೆಯದಾರಿ’ ಕಥೆಯಲ್ಲಿ ನಾಯಕಿ ಲಿಲ್ಲಿಯ ಅಂತಿಮನಿರ್ಧಾರ ಅನಿರೀಕ್ಷಿತ ಆದರೆ ಅದು ಅವಳ ಅನಿವಾರ್ಯ ಆಯ್ಕೆ. ಇಲ್ಲಿ ನಾಯಕಿಗೆ ಮದುವೆಯ ಬಂಧನವಿಲ್ಲದೇ ಮಗು ಬೇಕು. ಅದನ್ನು ಹಕ್ಕೊತ್ತಾಯದಿಂದ ಮಂಡಿಸುವುದಕ್ಕೆ ಹೊರಟ ನಾಯಕಿಯ ಬಗ್ಗೆ ಆ ಪುರುಷ ಪಾತ್ರಗಳಿಗೆ ಅದೆಷ್ಟು ಗಾಬರಿ! ಆದರೆ ಮದುವೆಯ ಬಂಧನವಲ್ಲದೇ ಪ್ರೇಮ, ಕಾಮವನ್ನು ಬಯಸುವ ಆಕೆಯ ಗೆಳೆಯರಿಗೆ ಆಕೆಗೆ ಒಂದು ಮಗು ಕೊಡಲು ಸಿದ್ಧರಿಲ್ಲ. ಅವಳು ಬೇಕು ಅವಳಿಗೇನು ಬೇಕೋ ಅದು ಅವರಿಗೆ ಬೇಕಿಲ್ಲ. ಕೊನೆಗೆ ಲೋಕ ತನಗೆ ಬೇಕಾದ್ದನ್ನು ಮಾತನಾಡಿಕೊಳ್ಳಲಿ ಹಣದ ಹಿಂದೆ ಹೋದಳು ಅಂತೆಲ್ಲಾ ..ಆದರೆ ನನ್ನ ಆಯ್ಕೆ ಎನ್ನುವುದು..? ನನ್ನ ಆಯ್ಕೆ ನನ್ನ ಬದುಕು ನನ್ನ ನಿರ್ಧಾರ ಎಂದುಕೊಂಡು ತನ್ನ ತಂದೆಯ ಗೆಳೆಯ ಶಂಕರಗೌಡರನೊಂದಿಗೆ ಆಕೆ ಹೊರಡುವ ನಿರ್ಧಾರಕ್ಕೆ ಬರುತ್ತಾಳೆ... ಹೀಗೆ ವೀಣಾಶಾಂತೇಶ್ವರ ಅವರ ಕಥೆಗಳು ಇಂಥ ಸಾಕಷ್ಟು ಸಾಧ್ಯತೆಗಳನ್ನು ಹುಡುಕಿಕೊಳ್ಳುತ್ತಲೇ ಹೋದವು.

ವೀಣಾಶಾಂತೇಶ್ವರ ಬರೆದ ‘ನಿರಾಕರಣೆ’ ಪುರಾಣದ ಕಥೆಯನ್ನು ಮೂಲವಾಗಿ ಇಟ್ಟುಕೊಂಡು ಹೆಣೆದ ಸಣ್ಣ ಕಥೆ. ಹೆಣ್ಣು ಶೋಷಣೆಯನ್ನು ಪ್ರತಿಭಟಿಸುವ ಸಾಮರ್ಥ್ಯವನ್ನು ಸಂಚಯಿಸಿಕೊಂಡಾಗಲೂ, ತಾಯ್ತನದ ಹೊಣೆ ಆಕೆಗೆ ಹೆಚ್ಚು ಮಹತ್ವವೆನಿಸುವುದು. ತಾನು ಶಾಕುಂತಲೆಯಿಂದ ದೂರವಾಗಲು ಶಾಪದ ಕಾರಣ ಹೇಳಿ ಕ್ಷಮೆ ಯಾಚಿಸಿ ಬಂದ ದುಷ್ಯಂತ ತನ್ನನ್ನು ಸ್ವೀಕರಿಸುವಂತೆ ಕೇಳಿಕೊಳ್ಳುತ್ತಾನೆ ಆದರೆ ವೀಣಾ ಶಾಂತೇಶ್ವರ ಆಧುನಿಕ ಪ್ರಗತಿಪರ ಮಹಿಳಾ ದೃಷ್ಟಿಕೋನದಿಂದ ಕಥೆಯನ್ನು ನೋಡುತ್ತಾರೆ. ದೂರ್ವಾಸರ ಶಾಪ ಕೇವಲ ನೆಪ. ಗಂಡಿಗೆ ಹೆಣ್ಣನ್ನು ಶೋಷಿಸಲು ಆ ಶೋಷಣೆಯನ್ನು ಸಮರ್ಪಿಸಲು ತನಗೆ ಬೇಕಾದಂತೆ ಕಥೆ ಹೆಣೆಯಲು ಹತ್ತು ಹಲವು ಸಾಧ್ಯತೆಗಳಿವೆ.ಆದರೆ ಈ ಕಥೆಯಲ್ಲಿ ಶಕುಂತಲೇ ದುಶ್ಯಂತನನ್ನು ನಿರಾಕರಿಸುತ್ತಾಳೆ.ಆದರೆ ಮಗ ಭರತನ ಭವಿಷ್ಯದ ಪ್ರಜ್ಞೆ, ಆತನ ವಿದ್ಯೆ, ಶ್ರೇಯಸ್ಸಿಗಾಗಿ, ರಾಜನೊಂದಿಗೆ ಅರಮನೆಗೆ ಬರಲು ಒಪ್ಪಿದರೂ, ಆಕೆ ಮುಂದೆ ದುಶ್ಯಂತನನ್ನು ಸೇರಲು ನಿರಾಕರಿಸುವ ಧೈರ್ಯ ಮಾಡುತ್ತಾಳೆ. ಶಕುಂತಲೆ ತನ್ನ ಬದುಕನ್ನು ದುಶ್ಯಂತನ ಅರಮನೆಯಲ್ಲಿ ಕಳೆಯುವ ನಿರ್ಧಾರಕ್ಕೆ ಬಂದರೂ, ಅಲ್ಲಿ ಒಳತೋಟಿಯಲ್ಲಿ ತನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳಲು ಇಚ್ಚಿಸುವುದಿಲ್ಲ. ಗಂಡನಂತೆ ತನಗೂ ಆತ್ಮಭಿಮಾನವಿದೆ. ಅದಕ್ಕೆ ಹೊರತಾಗಿ ಬದುಕನ್ನು ಅಪ್ಪಿಕೊಂಡ ನೋವನ್ನು ವೀಣಾ ಶಾಂತೇಶ್ವರ ಚಿತ್ರಿಸುತ್ತಾರೆ. ತನ್ನ ವ್ಯಕ್ತಿಗತ ಸುಖಕ್ಕಾಗಿ ಬಂದಿಲ್ಲವೆಂದು, ಮಗನ ಅಭಿವೃದ್ಧಿಗಾಗಿ, ಆ ಒಂದೇ ಕಾರಣ ಆ ಜವಾಬ್ದಾರಿ ತನ್ನನ್ನು ಅರಮನೆಗೆ ಕರೆತಂದಿರುವುದಾಗಿಯೂ, ಮುನಿ ಶಾಪದ ಕ್ಷುಲ್ಲಕ ಕಾರಣಗಳು ಗಂಡಿಗೆ ತನ್ನನ್ನು ಸಮರ್ಥಿಸಲು ಇರುವ ಕಾರಣಗಳು ಎಂದು ಅಂತಹ ಕಾರಣಕ್ಕೆ ಪ್ರೀತಿಸಿದ ಹೆಣ್ಣನ್ನು ಕೈಬಿಟ್ಟ ಪುರುಷನ ಪ್ರೀತಿಗೆ ಅರ್ಥವಿಲ್ಲವೆಂದು ಹೇಳಿ ತನ್ನ ಮಾನಸಿಕ ಧೈರ್ಯ, ಉದಾತ್ತ ವ್ಯಕ್ತಿತ್ವದಿಂದ ಮಾನ್ಯಳಾಗುತ್ತಾಳೆ. ಮಗನಿಗಾಗಿ ಆಕೆಯ ತ್ಯಾಗ ಅನನ್ಯವೆನಿಸುತ್ತದೆ.ಹಾಗೆಯೇ, ಇಂದಿನ ಆಧುನಿಕ ವ್ಯವಸ್ಥೆಯಲ್ಲಿಯೂ ಅನೇಕ ಕುಟುಂಬಗಳಲ್ಲಿ ಹೆತ್ತಕುಡಿಗಳಿಗಾಗಿ ನರಕಸದೃಶ ಜೀವನ ಮಾಡುತ್ತಿರುವ ಬಹುಪಾಲು ಗೃಹಿಣಿಯರಿದ್ದಾರೆ.

ವೀಣಾ ಅವರ ‘ಕವಲು’ ಕಥೆಯ ನಾಯಕಿ ಮಿನಿ(ಮೀನಾಕ್ಷಿ) ಅವಳ ಸಖನಾದವನು ಉದ್ದಕ್ಕೂ ಏಮಾರಿಸುತ್ತಲೇ ಹೋಗುತ್ತಾನೆ. ತಾನು ಶಾಂತಿಯೆಂಬ ಹೆಣ್ಣಿನೊಂದಿಗೆ ಮದುವೆಯೂ ಆಗುತ್ತಾನೆ. ಇಬ್ಬರಿಗೂ ಇಬ್ಬರು ಮಕ್ಕಳೂ ಇದ್ದಾರೆ. ಇದೆಲ್ಲ ಮುಗಿದ ಮೇಲೆ ನಾವಿಬ್ಬರೇ ಮದುವೆಯಾಗಿ ನಮ್ಮದೇ ಆದ ಮನೆ ಮಾಡಿಕೊಂಡು ಚಂದ ಬದುಕೋಣ ಎಂದು ಹೇಳುತ್ತಲೇ, ಹದನೈದು ವರ್ಷಗಳು ನನಸಾಗದ ಕನಸುಗಳನ್ನು ಕಟ್ಟುತ್ತ ತಾನೇ ಪ್ರಶ್ನೆ ಕೇಳುತ್ತ ಅವಳ ಉತ್ತರಕ್ಕೂ ಕಾಯದೇ ಎಲ್ಲದಕ್ಕೂ ತಾನೇ ಉತ್ತರಿಸುತ್ತ ಅವಳ ಅವರ ಸಣ್ಣ ಕನಸುಗಳನ್ನು ಈಡೇರಿಸದೆ ಅವಳ ಬದುಕನ್ನು ಹಾಳು ಮಾಡುತ್ತಾನೆ. ಆಕೆ ತನಗೊಂದು ತನ್ನಿಚ್ಛೆಯ ಬದುಕು ಇಂದು ಸಿಗಬಹುದಾ, ನಾಳೆ ಸಿಗಬಹುದಾ ಎಂದು ಹಂಬಲಿಸುತ್ತಲೇ ಸಾಗುತ್ತಾಳೆ. ಇದು ಸದ್ದಿಲ್ಲದೆ ನಡೆಯುವ ಶೋಷಣೆ. ಆದರೂ ನಾಯಕಿ ಹಾಗೆ ಅಂದುಕೊಳ್ಳುವುದಿಲ್ಲ. ಅವನಿಗೆ ಅವನದೇ ಆದ ಬದುಕಿದೆ. ಕಟ್ಟುಪಾಡು, ಕರ್ತವ್ಯ, ಜವಾಬ್ದಾರಿಗಳಿವೆ. ಅವೆಲ್ಲ ಮುಗಿಸಿಕೊಂಡು ತನ್ನ ಬಳಿ ಬರುತ್ತಾನೆ ಎಂದೇ ಕಾಯುತ್ತಾಳೆ. ಬರುತ್ತಾನಾ? ಅವ ಬರುವುದೇ ಇಲ್ಲ. ಆಕೆ ಕೆನಡಾಕ್ಕೆ ಹೋಗುವ ದೃಢ ನಿರ್ಧಾರವನ್ನು ಕಾಗದದಲ್ಲಿ ಬರೆದು ‘ಗಿರಿಜಾನಮದುವೆಮಾಡು ಅವಳಿಗೆನನ್ನ ಆಶೀರ್ವಾದಗಳು. ನಿನಗೆಹೆಚ್ಚಿಗೆಹೇಳುವ ಅವಶ್ಯಕತೆಯಿಲ್ಲ–ಥಿಂಣ ಚಿಡಿಜ ಚಿ ಛಿಡಿಚಿತಿಜ ಟಚಿಟಿ’ ‘ಎಂದುಬರೆದುಪತ್ರವನ್ನು ಅಂಚೆಗೆ ಕಳಿಸಿಸ್ಟೇಷನ್ ಕಡೆನಡೆಯುತ್ತಾಳೆ. ಆತನಹೇಡಿತನಕ್ಕೆ ‘ಥಿಂಣ ಚಿಡಿಜ ಚಿ ಛಿಡಿಚಿತಿಜ ಟಚಿಟಿ’ ಎಂಬ ಮಾತಿನಲ್ಲಿರುವ ವ್ಯಂಗ್ಯ ಧ್ವನಿಯಲ್ಲಿ ನಾಯಕನ ಅಸಮರ್ಥತೆಯನ್ನು ಅವನಿಗೆ ತಿಳಿಸಿ. ತನ್ನ ಹೊಸ ದಾರಿ ಹಿಡಿಯುತ್ತಾಳೆ.

ವೀಣಾ ‘ಕವಲು’ ಕಥಾ ಸಂಕಲನದಲ್ಲಿ ಬರುವ ಮತ್ತೊಂದು ಕಥೆ ‘ಅವಳ ಸ್ವಾತಂತ್ರ್ಯ’ ಮಧ್ಯಮವರ್ಗದ ಉದ್ಯೋಗಸ್ಥ ಮಹಿಳೆಯ ಜಂಜಾಟಗಳು, ತಲ್ಲಣಗಳು, ಸ್ವಾತಂತ್ರದ ಹಂಬಲ ಕಟುವಾಸ್ತವಗಳು ಈ ಕತೆಯಲ್ಲಿ ದಾಖಲಾಗಿವೆ. ಕಥಾ ನಾಯಕಿ ವಿಮಲಾ ಶಂಕರ್ ಮಹಿಳೆಯ ಸ್ವಾತಂತ್ರ್ಯವನ್ನು ಕುರಿತು ಭಾಷಣದಲ್ಲಿ ಆಡುವ ಮಾತುಗಳು ಕತೆಗೆ ವ್ಯಂಗ್ಯವನ್ನು ಮನದಲ್ಲಿ ಮೂಡಿಸುತ್ತದೆ. ಅವಳು ಹಣ್ಣಿನ ಕುರಿತು ಭಾಷಣದಲ್ಲಿ ಆಡುವ ಮಾತುಗಳು ಹೆಣ್ಣಿನ ಸಹಜ ಆಶಯಗಳು. ಆದರೆ ವಿಮಲಾ ಕುಟುಂಬದಲ್ಲಿ ಅದಕ್ಕೆ ತದ್ವಿರುದ್ಧವಾಗಿ ಬದುಕಬೇಕಾದ ಬದುಕಿನ ಕಟು ವಾಸ್ತವವನ್ನು ವೀಣಾ ಶಾಂತೇಶ್ವರ ನೇರವಾಗಿ ನಿರೂಪಿಸುತ್ತಾರೆ.ಇದು

ಉದ್ಯೋಗದ ನೆಪದಲ್ಲಿ ಸ್ವಾತಂತ್ರ್ಯದ ಭ್ರಮೆಯಲ್ಲಿ ಆತ್ಮವಂಚನೆಯಿಂದ ಬದುಕಬೇಕಾದ ಆಧುನಿಕ ಹೆಣ್ಣಿನ ಮತ್ತೊಂದು ಬಗೆಯ ಅನಿವಾರ್ಯತೆಯನ್ನು ಕಥೆ ಸಹಜವಾಗಿ ನಿರೂಪಿಸುತ್ತದೆ.

'ಬಿಡುಗಡೆ' ಕಥೆಯ ನಾಯಕಿ ಸರೋಜಾ. "ಹೆಣ್ಣಿನ ಮಟ್ಟಿಗೆ ಬಿಡುಗಡೆ ಎನ್ನವುದು ಇದೆಯಾ ಎಂಬ ಪ್ರಶ್ನೆಗೆ ಕಟುವಾಸ್ತವ ಉತ್ತರವನ್ನು ನಾಟಕೀಯವಾಗಿ ಮುಖಾಮುಖಿಯಾಗುತ್ತಾಳೆ ಕಥಾ ನಾಯಕಿ. ಆಧುನಿಕತೆಯು ಹೆಣ್ಣಿನ ಬಿಡುಗಡೆಯ ದಾರಿಯೆಂದು ಪ್ರತಿಪಾದಿಸಿದ, ಅದು ನಿಜವೆಂದು ನಂಬಿದ, ನೆಚ್ಚಿದ ಹೆಣ್ಣಿಗೆ ಒಲೆ ಬದಲಾದರೂ ಉರಿ ಬದಲಾಗಿದೆಯೇ?ಎನ್ನುವ ಕಟು ವಾಸ್ತವದ ಅರಿವನ್ನು ಮೂಡಿಸಿದ ಮೊದಲ ತಲೆಮಾರಿನ ಪ್ರತಿನಿಧಿ ಸರೋಜಾ".4

ಮೂವತ್ತೈದು ವರ್ಷ ಜೊತೆಗೆ ಬಾಳಿದ ಗಂಡ ಸತ್ತ ಗಳಿಗೆಯಲ್ಲಿ ಸರೋಜಾಳ ಪ್ರತಿಕ್ರಿಯೆ ಓದುಗರಲ್ಲಿ ದಿಗಿಲು ಹುಟ್ಟಿಸುತ್ತದೆ. ಗಂಡನ ಅಕಾರಣ ಅಧಿಕಾರದ ದಬ್ಬಾಳಿಕೆ, ಅನುಮಾನ, ದೌರ್ಜನ್ಯವನ್ನು ಸಹಿಸಿದ ಸರೋಜಾ, ಮಕ್ಕಳ ಸಲುವಾಗಿ ಬದುಕನ್ನು ತೇಯ್ದವಳು.ಗಂಡನ ಸಾವು ಆಕೆಯಲ್ಲಿ ದುಃಖ ತರಿಸುವುದಿಲ್ಲ. ಶವದ ಬಳಿ ಬರುವ ಮೊದಲು ಅಡುಗೆ ಕೋಣೆಗೆ ಸಕ್ಕರೆ ಹಾಕಿದ ಹಾಲು ಕುಡಿದು ಬರುವ ಅವಳ ವರ್ತನೆ ಎಂಥವರನ್ನೂ ಬೆಚ್ಚಿ ಬೀಳಿಸುತ್ತದೆ. ಆದರೆ ಸರೋಜಾಗೆ ಮಾತ್ರ ಅದು ಬಿಡುಗಡೆ ಅಕಾರಣವಾದ ದೌರ್ಜನ್ಯದಿಂದ ...ನಿತ್ಯ ನಿಂದನೆಗಳಿಂದ, ಪುಡಿಕಾಸು ಬೆಲೆಯಿರದ ಬಾಂಧವ್ಯದಿಂದ... ಪೊಳ್ಳು ದಾಂಪತ್ಯದಿಂದ... ಇಲ್ಲಿ ಸರೋಜಾ ಗಂಡನ ಸಾವನ್ನು ಬಯಸಿದವಳಲ್ಲ ಆದರೆ ಆಕಸ್ಮಿಕವಾಗಿ ಬಂದ ಗಂಡನ ಸಾವು ಆಕೆಯಲ್ಲಿ ಮೂಡಿಸಿದ ಭಾವನೆ ಹಾಗೂ ಹಾಗೆ ನೊಂದ ಯಾವ ಪ್ರಜ್ಞಾವಂತ ಹೆಣ್ಣಿಗೂ ಅನ್ನಿಸಬಹುದಾದ ವರ್ತನೆಯ ಸಾಧ್ಯತೆಯಾಗುತ್ತದೆ.

ಒಟ್ಟಾರೆಯಾಗಿ ವೀಣಾಶಾಂತೇಶ್ವರ ಅವರ ಕಥೆಗಳಲ್ಲಿರುವ ಹೆಣ್ಣಿನ ಮನೋಧರ್ಮ ಪಾರಂಪರಿಕ ಹೆಣ್ಣಿಗಿಂತ ಭಿನ್ನ ಹಾಗೂ ಅದಕ್ಕೆ ವೈರುಧ್ಯವಾದ ಆಧುನಿಕ ದೃಷ್ಟಿಕೋನವುಳ್ಳದ್ದು. ವೀಣಾಶಾಂತೇಶ್ವರ ಕಥೆಗಳ ವಾಸ್ತವಾಂಶವನ್ನು ಕುರಿತು ಖ್ಯಾತ ಸ್ತ್ರೀವಾದಿ ವಿಮರ್ಶಕಿ ಬಿ.ಎಸ್.ಸುಮಿತ್ರಾಬಾಯಿಯವರ ಮಾತುಗಳು ಇಲ್ಲಿ ಉಲ್ಲೇಖನೀಯ "ಸಾಂಪ್ರದಾಯಿಕತೆಯ ಆಚೆಗೆ ಚಾಚಿದ ವಿಚಾರ ಪರ ಪ್ರಜ್ಞೆಯೊಂದರ ಮೂಲಕ 'ನಿಜವಾದ ಪ್ರೇಮ'ದ ಪರಿಕಲ್ಪನೆ, ವಾಸ್ತವದ ಅನುಭವಗಳ ನೆಲೆಯಲ್ಲಿ ಶೋಧನೆಗೊಳಪಡುತ್ತದೆ. ಆತ್ಮ ಮರುಕದ ಆಚೆಗೆ ನಿರಂತರ ಪ್ರಶ್ನಿಸುವ ಕಣ್ಣುಳ್ಳ ಇಲ್ಲಿನ ಸ್ತ್ರೀ ತನ್ನ ಕುರಿತಾದ ಪುರಾಣಗಳನ್ನು ಪ್ರಶ್ನಿಸುವಳು.ಅದನ್ನು ಸೃಷ್ಟಿಸಿದಒಳ-ಹೊರಗನ್ನು ಪರಿಶೀಲಿಸಬಲ್ಲವಳು. ಸ್ತ್ರೀ ಪುರುಷರನ್ನು ಒಟ್ಟಿಗೆ ಹಿಡಿದಿಡಲು ನೆರವಾಗುತ್ತಿದ್ದ -ಸಾಂಪ್ರದಾಯಿಕತೆ ,ಅನುಕೂಲಗಳು ಪರಸ್ಪರ ಅವಲಂಬನೆಯ ಅವಶ್ಯಕತೆ, ಭಾವನೆ- ಕಾಮನೆಗಳೆಲ್ಲದರ ಮಿಶ್ರಣವುಳ್ಳ ವ್ಯವಹಾರಿಕ ತಂತ್ರಗಳನ್ನು ಆಕೆ ಶೋಧಿಸಲೆತ್ನಿಸುತ್ತಾಳೆ'5

ವೀಣಾಶಾಂತೇಶ್ವರ ಅವರ ಕಥೆಗಳಲ್ಲಿರುವ ಕಥಾನಾಯಕಿಯರು ಆದರ್ಶನಾರಿಯಾಗುವ ನೆಪದಲ್ಲಿ ಆತ್ಮವಂಚನೆ ಮಾಡಿಕೊಳ್ಳುವ, ಸ್ವಯಂ ಶೋಷಣೆಗೆ ಬಲಿಯಾಗುವ ಹೆಣ್ಣಿಗಿಂತ ವಾಸ್ತವ ಪ್ರಜ್ಞೆಯುಳ್ಳ, ತನ್ನ ಹಾಗೂ ಗಂಡಿನ ಸಂಬಂಧದೊಡನೆ ತನ್ನ ಅಸ್ತಿತ್ವ ಪ್ರಶ್ನೆಯನ್ನಿಟ್ಟು ಪರಿಶೀಲಿಸುವವರಾಗಿದ್ದಾರೆ. ಆಧುನಿಕ ಹೆಣ್ಣುತನ್ನ ಆಯ್ಕೆಯ ಬದುಕನ್ನು ಕಟ್ಟಿಕೊಳ್ಳಲು ಹೋದಾಗ ತನ್ನ ಎದುರಿಗಿರುವ ಆಯ್ಕೆ, ಸಾಧ್ಯತೆಗಳನ್ನು ಹುಡುಕುತ್ತಲೇ ಹೋಗುತ್ತಾಳೆ. ಈ ದಾರಿ ಇರಬಹುದಾ? ಆ ದಾರಿ ಇರಬಹುದಾ? ಅಂತೆಲ್ಲ... ಈ ಹುಡುಕಾಟ ನಮ್ಮನ್ನು ಯಾವ ಸತ್ಯದ ಕಡೆಗೆ ಕರೆದುಕೊಂಡು ಹೋಗುತ್ತದೆ ಎಂದರೆ, ತನಗೆ ಬೇಕಾದ ದಾರಿಯನ್ನು ಅವಳೇ ಹುಡುಕಿಕೊಳ್ಳಬೇಕು, ಸಿಗದಿದ್ದರೆ ಕಲ್ಲು ಮುಳ್ಳುಗಳ ಆಯ್ದು ತಾನೇ ಹೊಸ ದಾರಿ ನಿರ್ಮಿಸಿಕೊಳ್ಳಬೇಕು ಎಂಬ ಆಧುನಿಕ ಹೆಣ್ಣಿನ ಹೊಸ ನಡೆಯ ಸಾಧ್ಯತೆಯನ್ನು ಸೂಚ್ಯವಾಗಿ ಈ ಕಥೆಗಳು ತಿಳಿಸುತ್ತವೆ.

**ಕೊನೆಟಿಪ್ಪಣಿಗಳು**

1. ಚಂದ್ರಶೇಖರ್ ಆಲೂರ್, "ನವ್ಯಸಾಹಿತ್ಯದಲ್ಲಿ ಆಧುನಿಕತೆ ಮತ್ತು ಸ್ತ್ರೀ ಸ್ವಾತಂತ್ರ್ಯದ ಸ್ವರೂಪ", ಸಂ.ಬರಗೂರು ರಾಮಚಂದ್ರಪ್ಪ, "ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ ಸ್ವರೂಪ" ಪು.168.
2. ಲೇಖ-ಲೋಕ, ಪು.109
3. ಚ.ಸರ್ವಮಂಗಳ, "ಕನ್ನಡ ಬರಹಗಾರ್ತಿಯರ ಒಲವು "ನಿಲುವುಗಳು", ಸಂ.ಜಿ.ಎಸ್. ಶಿವರುದ್ರಪ್ಪ, "ಮಹಿಳೆಮತ್ತು ಕನ್ನಡಸಾಹಿತ್ಯ", ಪು.85.
4. 'ನಾರಿಕೇಳಾ'? "ಪ್ರಜಾವಾಣಿ ಅಂಕಣ", ಎಂ.ಎಸ್.ಆಶಾದೇವಿ, ಸಂಚಿಕೆ 01.03.2014.
5. ಬಿ.ಎಸ್. ಸುಮಿತ್ರಾ ಬಾಯಿ, "ಕನ್ನಡದ ಮಹಿಳಾ ಸಾಹಿತ್ಯ ಮತ್ತು ಸ್ತ್ರೀತ್ವದ ಶೋಧ", ಸಂ. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ,"ಸ್ತ್ರೀವಾದಿ ಸಾಹಿತ್ಯ ವಿಮರ್ಶೆ", ಪು.213.

**ಪರಾಮರ್ಶನ ಗ್ರಂಥಗಳು**


1. ನಡೆದದ್ದೇ ದಾರಿ(ಸಮಗ್ರ ಕಥನ ಸಾಹಿತ್ಯ)-ವೀಣಾ ಶಾಂತೇಶ್ವರ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆ-2011
2. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ - ಸಂ. ಬರಗೂರು ರಾಮಚಂದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.
3. ಕೊನೆಯ ದಾರಿ -ವೀಣಾ ಶಾಂತೇಶ್ವರ, ಅಕ್ಷರ ಪ್ರಕಾಶನ, ಸಾಗರ, 1973.
4. ಮಹಿಳೆ ಮತ್ತು ಕನ್ನಡ ಸಾಹಿತ್ಯ ಸಂಪಾದನೆ -ಜಿ.ಎಸ್.ಶಿವಶರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1979.
5. ಲೇಖಲೋಕ-2 ಸಂ. ನಾಗಮಣಿ ಎಸ್. ರಾವ್., ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, 1999.
6. ಸ್ತ್ರೀವಾದ ಚಿಂತನೆ ಮತ್ತು ಹೋರಾಟ, ಶ್ರೀಮತಿ ಎಚ್.ಎಸ್.,ಅಭಿರುಚಿ ಪ್ರಕಾಶನ, ಮೈಸೂರು, 2022.

7. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ– ಸಂ.ತೇಜಸ್ವಿ ನಿರಂಜನ, ಸೀಮಂತೀನಿ ನಿರಂಜನ, ಕನ್ನಡ ಸಂಘ, ಕ್ರೈಸ್ತ ಕಾಲೇಜು, ಬೆಂಗಳೂರು, 1994.
8. ಅಂಕಣ– ('ನಾರಿಕೇಳಾ'? ಪ್ರಜಾವಾಣಿ ಅಂಕಣ, ಎಂ.ಎಸ್.ಆಶಾದೇವಿ, ಸಂಚಿಕೆ 01.03.2014)
9. ನೇಮಿಚಂದ್ರ,"ಸ್ತ್ರೀ ವಾದಿ ಚಿಂತನೆ–ಸೃಜನಶೀಲ ಪ್ರತಿಕ್ರಿಯೆ", ಸಂ.ಬರಗೂರು ರಾಮಚಂದ್ರಪ್ಪ, "ಕನ್ನಡಸಾಹಿತ್ಯಮತ್ತುಸ್ತ್ರೀ ವಾದಿ ಚಿಂತನೆ", ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.
10. ಸಾಹಿತ್ಯ ಮತ್ತು ಪ್ರತಿಭಟನೆ – ಸಂ. ಜಿಎಸ್ ಶಿವರುದ್ರಪ್ಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1989.